ಕರ್ನಾಟಕ ಸರ್ಕಾರ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ಜನಸ್ಪಂದನ ಕೋಶ)

ಸಂಖ್ಯೆ:ಸಿಆಸುಇ:59:ಆರ್‌ಟಿಐ:2008

3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಗೋಪುರ,
ಬೆಂಗಳೂರು. ದಿನಾಂಕ:31-05-2008

## ಸುತ್ತೋಲೆ

ವಿಷಯ : ಮಾಹಿತಿ ಹಕ್ಕು ಅಧಿನಿಯಮ 2005ರಡಿ ಪ್ರತಿ ಇಲಾಖೆಯಲ್ಲೂ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಮೇಲ್ಮನವಿ ಪ್ರಾಧಿಕಾರದ ಹೆಸರುಗಳನ್ನು ನಾಮಫಲಕದಲ್ಲಿ ಬರೆಯಿಸಿ ಹಾಕುವ ಬಗ್ಗೆ.

ಉಲ್ಲೇಖ: ಕಾರ್ಯದರ್ಶಿಗಳು, ಕರ್ನಾಟಕ ಮಾಹಿತಿ ಆಯೋಗ ಇವರ ಪತ್ರ ಸಂಖ್ಯೆ: ಕೆ.ಮಾ.ಆ/41/p10/2008, ದಿನಾಂಕ: 21.05.2008.

-----

ಮಾಹಿತಿ ಹಕ್ಕು ಅಧಿನಿಯಮ 2005 (ಕೇಂದ್ರ ಕಾಯ್ದೆ ಸಂ: 22) ಈಗಾಗಲೇ ರಾಜ್ಯದಲ್ಲಿ ದಿ: 15.06.2005 ರಿಂದ ಜಾರಿಗೆ ಬಂದಿರುವುದು ಸರಿಯಷ್ಟೇ. ಈ ಕಾಯ್ದೆಯನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತರುವುದು ಸರ್ಕಾರದ ಎಲ್ಲಾ ಇಲಾಖೆಗಳು, ನಿಗಮ ಮತ್ತು ಮಂಡಳಿಗಳು, ಸರ್ಕಾರದಿಂದ ಅನುದಾನ ಪಡೆಯುವ ಸಂಘ ಸಂಸ್ಥೆಗಳಲ್ಲಿನ ಅಧಿಕಾರಿಗಳ ಗುರುತರವಾದ ಹೊಣೆಯಾಗಿರುತ್ತದೆ.

ಮಾಹಿತಿ ಹಕ್ಕು ಅಧಿನಿಯಮ ಪ್ರಕರಣ 5(1) ರಡಿಯಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿ, ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಮೇಲ್ಮನವಿ ಪ್ರಾಧಿಕಾರಿಗಳನ್ನು ನೇಮಿಸಿ ಅದನ್ನು ತಮ್ಮ ಕಛೇರಿಗಳ ಸೂಚನಾ ಫಲಕದಲ್ಲಿ ಪ್ರದರ್ಶಿಸಲು ಮತ್ತು ಸದರಿ ಅಧಿನಿಯಮದಡಿಯಲ್ಲಿ ಕಾಯ್ದೆ ಪ್ರಕಟಗೊಂಡು ಜಾರಿಗೊಂಡ ದಿನಾಂಕದಿಂದ 120 ದಿವಸಗಳೊಳಗಾಗಿ ಸರ್ಕಾರದ ಎಲ್ಲಾ ಕಛೇರಿಗಳೂ ಕಾಯ್ದೆ 4(1)ಬಿ ಗೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ಪ್ರಕಟಿಸಲು ಮತ್ತು ಪ್ರತಿ ವರ್ಷ ಡಿಸೆಂಬರ್ 31 ರೊಳಗೆ ಈ ಮಾಹಿತಿಯನ್ನು ನವೀಕರಿಸಿ ಪ್ರಕಟಪಡಿಸಬೇಕೆಂದು ಈಗಾಗಲೇ ಸಾಕಷ್ಟು ಬಾರಿ ಸುತ್ತೋಲೆಗಳ ಮೂಲಕ, ಪತ್ರಗಳ ಮೂಲಕ ಅಲ್ಲದೆ ಸರ್ಕಾರದ ಸಚಿವಾಲಯದ ಮಾಹಿತಿ ಹಕ್ಕು ವಿಭಾಗದ ಅಧಿಕಾರಿಗಳು ಈಗಾಗಲೇ ಜಿಲ್ಲೆಗಳಲ್ಲಿ, ತಾಲ್ಲೂಕುಗಳಲ್ಲಿ ಅಧಿನಿಯಮ ಕುರಿತು ಅಧಿಕಾರಿ/ಸಿಬ್ಬಂದಿಗಳಲ್ಲಿ ಅರಿವು ಮೂಡಿಸುವ ಸಂಬಂಧ ಭೇಟಿ ನೀಡಿದಾಗಲೂ ಕೂಡ ಹೆಚ್ಚಿನ ಒತ್ತು ನೀಡಿ ಮೇಲಿನ ಅಂಶಗಳನ್ನು ಕಡ್ಡಾಯವಾಗಿ ಪ್ರಕಟಿಸಲು ತಿಳಿಸಿರುವುದನ್ನು ಎಲ್ಲಾ ಇಲಾಖೆಗಳ ಗಮನಕ್ಕೆ ತರಲಾಗಿದೆ.

ಇತ್ತೀಚೆಗೆ ಕರ್ನಾಟಕ ಮಾಹಿತಿ ಆಯೋಗವು ಮೇಲೆ ಉಲ್ಲೇಖಿಸಿರುವ ತಮ್ಮ ಪತ್ರದಲ್ಲಿ ಕೆಲವು RTI Activists ಜೊತೆ ಸಭೆ ನಡೆಸಿದ್ದು, ಸದರಿ ಸಭೆಯಲ್ಲಿ ಸಾರ್ವಜನಿಕರು ಮತ್ತು ಪದಾಧಿಕಾರಿಗಳು ಆಯೋಗದೊಂದಿಗೆ ನಡೆದ ಸಂವಾದದಲ್ಲಿ ಸರ್ಕಾರದ ಸುಮಾರು ಇಲಾಖೆಗಳಲ್ಲಿ ಇದುವರೆವಿಗೂ ಮಾಹಿತಿ ಹಕ್ಕು ಅಧಿನಿಯಮ 2005 ರ ಸೆಕ್ಷನ್ 5(1) ರಡಿಯಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿ, ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಮೇಲ್ಮನವಿ ಪ್ರಾಧಿಕಾರಿಗಳನ್ನು ನೇಮಿಸಿಲ್ಲವೆಂದು ಅಥವಾ ನೇಮಿಸಿದ್ದರೂ ಸಹ ಅದನ್ನು ಕಛೇರಿಗಳ ಮುಂದೆ ಪ್ರದರ್ಶನ ಮಾಡಿಲ್ಲವೆಂದು ಮತ್ತು ಕಾಯ್ದೆ 4(1) ಬಿ ಗೆ ಸಂಬಂಧಿಸಿದ ಮಾಹಿತಿಯನ್ನು ಕೂಡ ತಯಾರು ಮಾಡಿಲ್ಲವೆಂದು, ಹಾಗೆ ತಯಾರು ಮಾಡಿದ್ದರು ಅದನ್ನು ಕಛೇರಿಯ ಹೊರಗಡೆ ಪ್ರದರ್ಶಿಸಿಲ್ಲವೆಂದು ಮತ್ತು ಇದನ್ನು ಕೆಲವು ಇಲಾಖೆಗಳು ಇದನ್ನು ನವೀಕರಿಸದೆ ಇರುವ ಬಗ್ಗೆ ಸಾರ್ವಜನಿಕರು/ಸಂಘ ಸಂಸ್ಥೆಯ ಪದಾಧಿಕಾರಿಗಳು ತಿಳಿಸಿದ್ದಾರೆ. ಕರ್ನಾಟಕ ಮಾಹಿತಿ ಆಯೋಗವು ಇದನ್ನು ಗಂಭೀರವಾಗಿ ಪರಿಗಣಿಸಿದೆ.

ಆದ್ದರಿಂದ, ಈ ಕೆಳಕಂಡಂತೆ ಕೂಡಲೇ ಕ್ರಮ ವಹಿಸಲು ಸಚಿವಾಲಯದ ಎಲ್ಲಾ ಇಲಾಖೆಗಳು ಮತ್ತು ಸರ್ಕಾರದ ಇತರ ಇಲಾಖೆಗಳು ಕೂಡಲೇ ಕ್ರಮ ಕೈಗೊಳ್ಳಲು ಕೋರಲಾಗಿದೆ.

1. ಮಾಹಿತಿ ಹಕ್ಕು ಅಧಿನಿಯಮ ಪ್ರಕರಣ 5(1) ರಡಿಯಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿ, ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಮೇಲ್ಮನವಿ ಪ್ರಾಧಿಕಾರಿಗಳನ್ನು ನೇಮಿಸಿ, ಅದನ್ನು ತಮ್ಮ ಕಛೇರಿಗಳ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರದರ್ಶಿಸಬೇಕು.

2. ಮಾಹಿತಿ ಹಕ್ಕು ಕಾಯ್ದೆ 4(1) ಬಿ ಗೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ಪ್ರಕಟಿಸಿ ಪ್ರತಿ ವರ್ಷ ಡಿಸೆಂಬರ್ 31 ರೊಳಗೆ ಕಾಲೋಚಿತಗೊಳಿಸಬೇಕು.

3. ವೆಬ್‌ಸೈಟ್ ಹೊಂದಿರುವ ಇಲಾಖೆಗಳು ಮಾಹಿತಿ ಹಕ್ಕು ಅಧಿನಿಯಮ 2005 ರಡಿ ಪ್ರಕರಣ 4(1) ಬಿ ಗೆ ಸಂಬಂಧಿಸಿದಂತೆ ಮತ್ತು ಪ್ರಕರಣ 5(1) ರಡಿ ಸಾರ್ವಜನಿಕ ಮಾಹಿತಿ ಅಧಿಕಾರಿ, ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಮೇಲ್ಮನವಿ ಪ್ರಾಧಿಕಾರಿಗಳ ವಿವರಗಳನ್ನ ವೆಬ್‌ಸೈಟ್‌ನಲ್ಲಿ ಪ್ರಕಟ ಪಡಿಸಬೇಕು ಮತ್ತು ಬದಲಾವಣೆಗಳಾದಂತೆ ಕೂಡಲೇ ಕಾಲೋಚಿತಗೊಳಿಸಬೇಕು.

(ಎಂ.ವಿ.ವೇದಮೂರ್ತಿ)
ಸರ್ಕಾರದ ಅಪರ ಕಾರ್ಯದರ್ಶಿಗಳು,
ಸಿಆಸುಇ (ಜನಸ್ಪಂದನ ಕೋಶ)

ಗೆ,

1. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು
2. ಎಲ್ಲಾ ಇಲಾಖಾ ಮುಖ್ಯಸ್ಥರು
3. ಎಲ್ಲಾ ಜಿಲ್ಲಾಧಿಕಾರಿಗಳು.
4. ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
5. ಎಲ್ಲಾ ನಿಗಮ ಮತ್ತು ಮಂಡಳಿಗಳ ಮುಖ್ಯಸ್ಥರು.
6. ಹೆಚ್ಚಿನ ಪ್ರತಿ

ಪ್ರತಿ:

ಕಾರ್ಯದರ್ಶಿ, ಕರ್ನಾಟಕ ಮಾಹಿತಿ ಆಯೋಗ, ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ.